ಗಜಾನನ ಮಕ್ಕಿಗದ್ದೆಯ ದಣಪೆಯ ಸನಿಹ ನಿಲ್ಲಿಸಿದ್ದ ಕೆಂಪು ಕಾರನ್ನು ಮಣ್ಣು ರಸ್ತೆಯಲ್ಲಿ ಓಡಿಸಿದ.

ಮುಸ್ಸಂಜೆಯ ಹಳದಿ ಬಿಸಿಲು ಇಳಿಯುತ್ತಿದ್ದ ಮಕ್ಕಿಗದ್ದೆಯ ಹಾಳಿ ಕಂಠದ ಮೇಲೆ ಕಂಬಳಿ ಹಾಸಿದ ನೆರಳಲ್ಲಿ ಶ್ರೀಪತಿ ಕುಳಿತ. ಅರ್ಧ ವೃತ್ತಾಕಾರದಲ್ಲಿ ನಾಲ್ಕು ಹಂತಗಳಲ್ಲಿ ತಗ್ಗುತ್ತ ಹೋದ ಗದ್ದೆಯ ಬಯಲು ಬೆಟ್ಟದ ತಳದಲ್ಲಿ ಕಲ್ಲಿನ ಕಟ್ಟೆಯ ಗಡಿ ಪಡೆದಿತ್ತು. ಮನೆಗೆ ಗದ್ದೆಯ ಹಾಳಿ ನಡುವೆ ಬಳಸಿ ಬಂದ ಏರುಸಿರಿನ ದಾರಿ. ಪಕ್ಕದಲ್ಲಿ ಬಂದಳಕ ಹಬ್ಬಿದ ಹಲಸಿನ ಮುದಿ ಮರ. ಅದೆಷ್ಟೊ ವರ್ಷಗಳಿಂದ ಪಹರೆ ಕಾಯುತ್ತ ಆಕಾಶ ನೋಡುತ್ತ ನೆನಪಾಗಿ ನಿಂತ ಎತ್ತರದ ಎರಡು ತೆಂಗಿನ ಮರಗಳು. ಮನೆಯ ಹಿಂದೆ ಒಂಟಿಮನೆಯನ್ನು ಕೋಟೆಯಂತೆ ಕಾಯುತ್ತಿರುವ ಕಾಡು. ಕಾಡು ಹೊಕ್ಕು ಪರ್ವತೇಶ್ವರನ ಅಡಿದಾವರೆಗೆ ನಮಿಸಲು ಅಂಕುಡೊಂಕಾಗಿ ಹರಿದ ಅನಾಮಿಕ ದಾರಿ. ಮನೆಯ ಹಿತ್ತಲಾಚೆ ಕಾಯಲಾಗದೆ ಸೋತು ಕುಸಿದ ಪಾಗಾರಿನ ನಡುವೆ ಪಾಳು ತೋಟ. ಕಡುನೀಲಿ ಅಕಾಶ, ಆಗಾಗ ಬೀಸುವ ತಂಗಾಳಿ ಮತ್ತು ಹಾರಿಹೋದ ಬೆಟ್ಟದ ಪಾರಿವಾಳ ನೋಡುತ್ತ ಉಲ್ಲಸಿತನಾದ. ಅಜ್ಜ ಬದುಕಿದ್ದಾಗ ಶ್ರೀಪತಿಗೆ ಇಲ್ಲಿಗೆ ಬಂದಿದ್ದ ನೆನಪು. ಅಜ್ಜಿ ತೀರಿಹೋಗಿ ಒಂಟಿ ಜೀವಿಯಾಗಿದ್ದ. ಬೆನ್ನು ಬಾಗಿದ್ದ ಸದಾ ಕಂಕುಳ ಸಂಧಿಯಲ್ಲಿ ಹೊಡಚಲು ಹೊಗೆ ವಾಸನೆಯ ಕಂಬಳಿ ಸಿಕ್ಕಿಸಿಕೊಂಡು ಲಂಗೋಟಿಯಲ್ಲಿ ಬೆವರಿಕೊಂಡಿರುತ್ತಿದ್ದ, ಕೆಲಸದವನ ಜೊತೆ ತಾನು ಬೇಯಿಸಿದ್ದನ್ನು ಹಂಚಿ ಉಣ್ಣುತ್ತಿದ್ದವ ಸಾಯುವಾಗ ಗಟ್ಟಿಮುಟ್ಟಾಗಿಯೇ ಇದ್ದ. ಕೆಲಸದವನ ಪಕ್ಕ ನಿಂತು ತೆಗೆಯಿಸಿದ ಅಜ್ಜನ ಫೋಟೊ ಹೊಸ್ತಿಲ ಗೋಡೆಯ ಮೇಲಿತ್ತು. ಹಿಂಬಾಚಿದ ಕೂದಲು ಅಜ್ಜನ ಯಕ್ಷಗಾನ ಪ್ರೀತಿಯನ್ನು ಸಾರುತ್ತಿತ್ತು. ಅವರಿಬ್ಬರ ಮುಖದಿಂದ ಹೊರಸೂಸಿದ ಮೌನ ಮನೆಯನ್ನು ತುಂಬಿತ್ತು. ಇಂಥಾದ್ದೊಂದು ಅಪೂರ್ವ ಮೌನಕ್ಕೆ ಮರಳಲು ತಾನು ಇಪ್ಪತ್ತು ವರ್ಷ ಕಾಯಬೇಕಾಯಿತಲ್ಲ ಎಂದುಕೊಂಡ.

ಜನಾರ್ದನ ದಂಪತಿ ಮತ್ತು ಶ್ರೀಪತಿ ಒಂದು ಸುಂದರ ಬೆಳದಿಂಗಳ ರಾತ್ರಿಯನ್ನು ಪರ್ವತೇಶ್ವರದಲ್ಲಿ ಕಳೆದರು. ಬಹಳ ವರ್ಷಗಳ ನಂತರ ಅನ್ನದ ಪರಿಮಳ ಮನೆ ತುಂಬಿತು. ಜನಾರ್ದನ ಅವನಿಗಾಗಿಯೇ ಹಾಸಿಟ್ಟಿದ್ದ ಹಾಸಿಗೆ ಹಿಡಿದು ಮಲಗಿದ. ಕಾದಂಬರಿ ಸದಾ ಅವನ ಮಗ್ಗಲಲ್ಲಿರುತ್ತಿತ್ತು. ಎಲ್ಲರೂ ನಿರೀಕ್ಷಿಸಿದಂತೆ ಪರ್ವತೇಶ್ವರ ಅವನೊಳಗೆ ಜಾದೂ ಮಾಡಲೇ ಇಲ್ಲ. ಗಜಾನನ ಕಟ್ಟೆಮನೆಗೆ ವಾಪಸ್ಸಾದ. ನಸುಕಿಗೆದ್ದು ಮಂಜು ಮುಸುಕಿದ ದಾರಿಯಲ್ಲಿ ನಡೆದು ಯಮುನಕ್ಕ ಮಗನ ಜೊತೆಗೆ ಪರ್ವತೇಶ್ವರ ಗುಡಿಗೆ ಹೋಗಿ ಕೈಮುಗಿದು ಬಂದಳು. ಮಧ್ಯರಾತ್ರಿಯೊಮ್ಮೆ ಬೆಟ್ಟದ ನಿಶ್ಯಬ್ದ ಮತ್ತು ಮನೆಯೊಳಗಿನ ಕತ್ತಲೆಗೆ ಯಮುನಕ್ಕ ಭಯಪಟ್ಟಿದ್ದಳು. ಸೋದರಿ ಜಾನಕಿಯ ಹೆರಿಗೆ ಮತ್ತು ಬಾಣಂತನವನ್ನು ಇಲ್ಲಿಯೇ ಪೂರೈಸಬೇಕೆಂದು ಶ್ರೀಪತಿ ನಿಶ್ಚಯಿಸಿದ್ದಾನೆ. ಕೂಸು ಜನಿಸುವ ಜಾಗ ಕುಟುಂಬಕ್ಕೆ ಮನೆಯಾಗುತ್ತದೆಯಂತೆ. ಜಾನಕಿ ತಪಾಸಣೆಗೆ ಹೋಗುತ್ತಿದ್ದ ಪ್ರಸೂತಿ ವೈದ್ಯರಿಗೆ ಮುಂಚಿತವಾಗಿಯೇ ಮಾಹಿತಿ ತಲುಪಿಸಲು ಹೇಳುವುದನ್ನು ನೆನಪಿಸಲು ಗಜಾನನನಿಗೆ ಅರಿಕೆ ಮಾಡಿದ್ದಾಳೆ. ಕೂಸಿಗೆ ತೊಟ್ಟಿಲು, ಬಾಣಂತಿಗೆ ಹಸುವಿನ ತುಪ್ಪ ತಂದಿರಿಸಲು ಶ್ರೀಪತಿಗೆ ತಿಳಿಸಿದ್ದಾಳೆ. ತಿಂಗಳು ತುಂಬುವ ಮೊದಲೆ ಜಾನಕಿಯನ್ನು ಕರೆತರುವ ವ್ಯವಸ್ಥೆಯಾಗಬೇಕು. ಅಜ್ಜಿ ಎಂದು ಕರೆಯುವ ಪುಟ್ಟ ಜೀವವನ್ನು ನೋಡುವ ತವಕದ ಬೆನ್ನಲ್ಲೇ ಇದ್ದರೂ ಇಲ್ಲದಂತಿರುವ ಗಂಡನ ಸ್ಥಿತಿಗೆ ಬೇಸರವಾಗುತ್ತದೆ. ಮರುಕ್ಷಣ ಶ್ರೀಪತಿಯ ಮನೆ ಮದುವೆಯ ಸಂಭ್ರಮ ಕಲ್ಪಿಸಿಕೊಂಡು ಹುರುಪಾಗುವಳು. 'ಪರ್ವತೇಶ್ವರನ ಕೃಪೆಯಿಂದ ನಿನ್ನ ಅಪ್ಪನಿಗೆ ಗುಣವಾಗಿದ್ದರೆ ಸಾಕಿತ್ತು.' ಯಮುನಕ್ಕಳ ಪ್ರಾರ್ಥನೆಯ ಧಾಟಿಯ ವ್ಯಾಕುಲತೆಗೆ ಶ್ರೀಪತಿ, 'ಪುಸ್ತಕವೇ ಅವನಿಗೆ ನಿಜವಾದ ಪ್ರಪಂಚ. ಅಲ್ಲಿಯೇ ಅವನ ಸಂತ್ರಸ್ತ ಜೀವನ ಮುಂದೆ ಸಾಗ್ತದೆ ಬಿಡು' ಎಂದು ಸಮಾಧಾನ ಮಾಡಿದ.

ಗಜಾನನನ ಕಾರಿನಲ್ಲಿ ಖಂಡಗಾರಿನ ಭಾವೀ ಮಾವ ಮತ್ತು ಅವನ ಮಗಳು ಬಂದಿಳಿದರು. ಅಪ್ಪ-ಮಗಳು ಸಂಕೋಚಪಡದೆ ಸಲೀಸಾಗಿ ಬೀಗತನದ ಸಲಿಗೆಯಲ್ಲಿ ಓಡಾಡಿದರು. ಮನೆ ತುಂಬಲಿರುವ ನವವಧು ಮತ್ತು ಶ್ರೀಪತಿಯ ದಾಂಪತ್ಯದ ಕನಸು ನೇಯುತ್ತಿದ್ದ ನೋಟದ ನಡುವೆ ಮಂದಹಾಸದ ವಿನಿಮಯವಾಯಿತು. ಸೊಸೆಯ ಕಲ್ಪನೆಯಲ್ಲಿ ಯಮುನಕ್ಕನ ನೆರಳಲ್ಲಿ ನಡೆದಾಡಿದಳು. ಉಗ್ಗದಲ್ಲಿ ತಂದಿದ್ದ ಹಾಲಲ್ಲಿ ಅವಳು ಮನೆಯೊಡತಿಯ ಪಟ್ಟ ವಹಿಸಿಕೊಂಡ ಮುಹೂರ್ತದ ಸೂಚನೆ ಎಂಬಂತೆ ಚಹಾ ಮಾಡಿ ನೀಡಿದಳು. ಭಾವಿ